ಶ್ರೀ ಡಿ.ಬಿ. ಚಂದ್ರೇಗೌಡ : ನೀವು ನಿಜವಾಗಿ ಬುರುಡೆ ಬಿಟ್ಟುಕೊಂಡು ಬಂದಿದ್ದೀರಿ. ಅದಕ್ಕೆ ಏತಕ್ಕೆ ಹೆದರುತ್ತೀರಿ?

12.40 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ಹಿಂದಿನ ಸರ್ಕಾರದವರು ಬುರುಡೆ ಬಿಟ್ಟುಕೊಂಡು ಬಂದರು. ನೀವು ಬಿಡುವುದಿಲ್ಲವೆಂದುಕೊಂಡಿದ್ದೆ. ನೀವೇನಾದರೂ ಆ ರೀತಿ ಬಿಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ನನ್ನ ತೀರ್ಮಾನ ಒಳ್ಳೆಯದಾಗಿರುವುದರಿಂದ ನಾಗರಾಜ್‌ರವರೆ ಪ್ರಶ್ನೆಗೆ ಉತ್ತರ ತೆಗೆದುಕೊಳ್ಳಬೇಕು. ತಾವು ಪ್ರಶ್ನೆ ಕೇಳದೇ ಮಾತನಾಡುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳಿದೆ ನೀವು ಬುರುಡೆ ಬಿಟ್ಟುಕೊಂಡು ಬಂದಿರುತ್ತೀರಿ. ಅವರು ಟೋಪಿ ಹಾಕಿಕೊಂಡು ಬಂದಿರುತ್ತಾರೆ ಎಂದು.

ಶ್ರೀ ಎಸ್. ಬಂಗಾರಪ್ಪ : ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಸಂದರ್ಭದಲ್ಲಿ ಬೇರೆ ವಿಚಾರದಲ್ಲಿ ಬುರುಡೆ ಬಿಟ್ಟಿದ್ದಾರೆ. ಅದೆಲ್ಲ ಬೇರೆ ಚರ್ಚೆ ಮಾಡೋಣ. ಇದಕ್ಕೆ ಸಂಬಂಧಪಟ್ಟ ಹಾಗೆ ಬುರುಡೆಗಿರುಡೆ ಏನು ಕಾಣಿಸುತ್ತಿಲ್ಲ. ಅದರಲ್ಲಿ 168 ಎಕರೆ ಜಕ್ಕೂರ್ ಹತ್ತಿರ ಗೊತ್ತುಮಾಡಿ ಬೇಲಿ ವಗೈರೆ ಹಾಕುವ ಬಗ್ಗೆ ತೀರ್ಮಾನ ಮಾಡಿದ್ದೇವೆ. ಮಾನ್ಯ ಸಭಾದ್ಯಾಕ್ಷರೇ ಮತ್ತೊಂದು ವಿಚಾರ ಹೇಳುವುದಾದರೆ ಇದನ್ನು ಡೆವಲಪ್‌ಮೆಂಟ್ ಮಾಡಬೇಕೆಂದು 1988-89ರಲ್ಲಿ 33 ಲಕ್ಷ ರೂಪಾಯಿಗಳನ್ನು ಹಣವನ್ನು ಕೂಡ ಇಟ್ಟಿದ್ದೇವೆ. 1989-90ರಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು 1990-91ರಲ್ಲಿ ಒಂದು ಲಕ್ಷ ರೂಪಾಯಿಗಳನ್ನು 1991-92ನೇ ಸಾಲಿಗೆ ನಾವು ಅದಕ್ಕೆ 20 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಏತಕ್ಕೆಂದರೆ ಕೊನೆಯ ಪಕ್ಷ ಇದು ಶಿಫ್ಟ್ ಮಾಡಿ ಹೊರಗಡೆ ಹಾಕಬೇಕೆನ್ನುವ ದೃಷ್ಟಿಯಿಂದ ಹಣವನ್ನು ಕೂಡ ಜಾಸ್ತಿ ಇಟ್ಟಿದ್ದೇವೆ. ಆದ್ದರಿಂದ 20 ಲಕ್ಷ ರೂಪಾಯಿ ಇಟ್ಟಿರತಕ್ಕಂಥದ್ದು ಏನು ತೋರಿಸುತ್ತದೆಂದರೆ ಅದನ್ನು ಡೆವಲಪ್‌ಮೆಂಟ್ ಮಾಡಬೇಕೆಂದು ಇದರ ಬಗ್ಗೆ ಸರ್ಕಾರ ತೀವ್ರವಾಗಿರತಕ್ಕಂಥ ಗಮನಹರಿಸಿ ಕಾರ್ಯಕ್ರಮ ಹಾಕಿಕೊಂಡಿದೆ.

ನಗರದ ಸರಹದ್ದಿನಲ್ಲಿ ಸಂಚಾರದ ನೂಕುನಗ್ಗಲು

2722 - ಶ್ರೀ ಕೆ.ವಿ. ರವೀಂದ್ರ ನಾಥ ಬಾಬು. (ಕೊಟ್ಟೂರು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸೂರು ರಸ್ತೆ ಮತ್ತು ತುಮಕೂರು ರಸ್ತೆಯಲ್ಲಿ ಸತತವಾಗಿ ಸಂಚಾರ ತಡೆ ಆಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಆ) ಕಛೇರಿ ವೇಳೆಯಲ್ಲಿ (ಪೀಕ್ ಅವರ್ಸ್) ಸಂಚಾರಿ ಪೋಲೀಸರು ಕರ್ತವ್ಯದ ಮೇಲೆ ಇರದಿರುವುದು ನಿಜವೇ?

ಇ) ಈ ಅಡಚಣೆ ಅಸ್ತವ್ಯಸ್ತ, ಕಾಲವ್ಯಯ ಮತ್ತು ಇಂಧನ ವ್ಯಯಕ್ಕೆ ಕಾರಣವಾಗುವುದಿಲ್ಲವೇ?

ಈ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು

ಆ) ಕಛೇರಿ ವೇಳೆಯಲ್ಲಿ ಸಂಚಾರಿ ಪೋಲೀಸರನ್ನು ಮುಖ್ಯವಾದ ವೃತ್ತಗಳಲ್ಲಿ ಮುಖ್ಯರಸ್ತೆಗಳಲ್ಲಿ ಕರ್ತವ್ಯಕ್ಕೆ ನೇಮಿಸಲಾಗುತ್ತಿದೆ. ಯಾರಾದರೂ ಗೈರು ಹಾಜರಾದಲ್ಲಿ ಅಂತಹವರ ಮೇಲೆ ಕಠಿಣ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಸಂಚಾರ ನಿಯಂತ್ರಣಕ್ಕೆಂದು ನೇಮಕ ಮಾಡಿದ ಪೋಲೀಸ್ ಕಾನ್ಸ್‌ಟೇಬಲ್‌ಗಳು ತಮಗೆ ನೇಮಿಸಲ್ಪಟ್ಟಿರುವ ಸ್ಥಳದಲ್ಲಿ ಇರುವುದನ್ನು ಖಾತರಿಪಡಿಸಲು ಅನಿರೀಕ್ಷಿತ ತಪಾಸಣೆಗಳನ್ನು ಡೆಪ್ಯೂಟಿ ಪೋಲೀಸ್ ಕಮೀಷನರ್ ಸಂಚಾರರವರು ಸೇರಿದಂತೆ ಹಿರಿಯ ಅಧಿಕಾರಿಗಳು ಮಾಡುತ್ತಿದ್ದಾರೆ.

ಇ) ಹೌದು.

ಈ) ವಾಹನ ನಿಲುಗಡೆ ಇಲ್ಲದ ಸ್ಥಳಗಳಲ್ಲಿ ವಾಹನ ನಿಲ್ಲಿಸುವುದು ಸಂಚಾರ ಅಡಚಣೆಗೆ ಮುಖ್ಯ ಕಾರಣವಾಗುತ್ತದೆ. ಸಂಚಾರ ಪೋಲೀಸ್‌ನವರು ಈ ಬಗ್ಗೆ ಕಟ್ಟುನಿಟ್ಟಾದ ಕ್ರಮವನ್ನು ಜರುಗಿಸಿ ಸಂಚಾರ ಅಡಚಣೆಗಳು ಉಂಟಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ. ಹೊಸೂರು ರಸ್ತೆಯಲ್ಲಿರುವ ಮಡಿವಾಳ ಚೆಕ್‌ಪೋಸ್ಟ್‌ನ್ನು ಮತ್ತು ಉಳಿದ ಚೆಕ್‌ಪೋಸ್ಟ್‌ಗಳನ್ನು ಹಾಲಿ ಇರುವ ಸ್ಥಳದಿಂದ 8 ಯಾ 10.ಕಿ.ಮೀ. ದೂರದ ವರೆಗೆ ಸ್ಥಳಾಂತರಿಸಲು ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯವರನ್ನು ಕೇಳಿಕೊಳ್ಳಲಾಗಿದೆ. ಅದೇ ರೀತಿ ಹೆಚ್ಚು ಸಂಚಾರ ಅಡಚಣೆ ಆಗುವ ಸ್ಥಳಗಳನ್ನು ಸಂಚಾರ ಪೋಲೀಸ್ ಅಧಿಕಾರಿಗಳು ಗುರುತಿಸಿ ಸಂಚಾರ ಇಂಜಿನಿಯರಿಂಗ್‌ನ ಪರಿಣತರೊಂದಿಗೆ ಸೇರಿ ಅವುಗಳ ಪರಿಹಾರಕ್ಕೆ ಉತ್ತರ ಹುಡುಕಲಾಗುತ್ತಿದೆ.

ಹೊಸೂರು ರಸ್ತೆಯನ್ನು ವಿಶಾಲಗೊಳಿಸುವುದರಿಂದ ಸಂಚಾರ ತಡೆಯನ್ನು ನಿವಾರಿಸಬಹುದೆಂದು ತಿಳಿದುದರಿಂದ, ಬೆಂಗಳೂರು ನಗರ ಪಾಲಿಕೆ ಮತ್ತು ರಾಷ್ಟ್ರೀಯ ಹೆದ್ದಾರಿ ಇಲಾಖೆಯೊಡನೆ ಸದರಿ ಹೊಸೂರು ರಸ್ತೆಯನ್ನು ನಾಲ್ಕು ಲೈನ್‌ರಸ್ತೆಯನ್ನಾಗಿ ರಚಿಸಲು ಸಲಹೆ ಮಾಡಿದೆ. ಇದನ್ನು ಬೆಂಗಳೂರು ಮಹಾನಗರಪಾಲಿಕೆ ಮತ್ತು ರಾಷ್ಟ್ರೀಯ ಹೆದ್ದಾರಿ ಇಲಾಖೆಯೊಡನೆ ವ್ಯವಹಾರಿಸಲಾಗುತ್ತಿದೆ.

ಶ್ರೀ ಕೆ.ವಿ. ರವೀಂದ್ರನಾಥ್ ಬಾಬು : ಮಾನ್ಯ ಅಧ್ಯಕ್ಷರೇ. of traffic Jams on whether Government is aware of the occurance of Hosur and Tumkur road regurlarly ಎನ್ನುವದನ್ನು ಪ್ರಶ್ನೆಗೆ ಎಸ್ ಎಂದು ಹೇಳಿದ್ದಾರೆ. ಪೀಕ್ ಹವರ್ಸ್‌ನಲ್ಲಿ ಎಂದರೆ ಪೋಲೀಸ್‌ನವರು ಇರುತ್ತಾರೆಂದು ಕೊಟ್ಟಿದ್ದಾರೆ. ಅಂದರೆ ಪೋಲೀಸ್‌ನವರು ಇದ್ದುಕೊಂಡು ಈ ರೀತಿ ಆಗುತ್ತಿದೆಯಲ್ಲ ಅದಕ್ಕೆ ಹೇಳಬೇಕಾಗುತ್ತದೆ. ಮುಖ್ಯವಾಗಿ ಈ ತುಮಕೂರು ರೋಡ್‌ನಲ್ಲಿ ಟ್ರಾಫಿಕ್ ಜಾಸ್ತಿಯಾಗಿರುತ್ತದೆ. ಯಾರಾದರೂ ಹೊರಗಡೆ ಕಂಟ್ರೀಇಂದಬಂದರೆ ಅಪಾಯಕ್ಕೆ ಬಂದಹಾಗೆ ಆಗುತ್ತದೆ. ಸಪರೇಟ್ ರೋಡ್ಸ್ ಇದ್ದಕ್ಕೆಂದು ಕೂಡ ಅಪೋಸಿಟ್ ಡೈರೆಕ್ಷನ್‌ನಲ್ಲಿ ರಾಂಗ್ ಟ್ರಾಫಿಕ್‌ನಲ್ಲಿ ಹೆವಿ ವೆಹಿಕಲ್ಸ್ ಮೂವ್ ಆಗುತ್ತಿರುತ್ತದೆ.

ಇದರಿಂದಾಗಿ ಸಾಕಷ್ಟು ಆಕ್ಸಿಡೆಂಟ್ ಆಗಿ ಸ್ಪಾಟ್‌ನಲ್ಲಿ ಆಗತಕ್ಕಂಥದ್ದನ್ನು ನಾವು ನೋಡುತ್ತಿರುತ್ತೇವೆ. ಆಮೇಲೆ ಹೊಸೂರು ರೋಡ್‌ನಲ್ಲಿ ಬಸ್‌ಗಳು ಮೇನ್ ರೋಡ್‌ನಲ್ಲಿ ನಿಂತಿರುತ್ತವೆ. ಮೇನ್ ರೋಡಿನಲ್ಲಿ ಸ್ವಲ್ಪ ಸೈಡಿಗೆ ಜಾಗ ಮಾಡಿಕೊಟ್ಟರೆ ಸಾಕಷ್ಟು ವೆಹಿಕಲ್ಸ್ ಓಡಾಡುವುದಕ್ಕೆ ಅನುಕೂಲವಾಗುತ್ತದೆ. ಒಂದು ನಿಮಿಷ ಬಸ್ ನಿಂತುಕೊಂಡರೆ ಹಿಂದೆ ಹತ್ತಾರು ವೆಹಿಕಲ್ಸ್ ನಿಂತುಬಿಡುತ್ತವೆ. ಇದರಿಂದ ಗಂಟೆಗಟ್ಟಲೆ ಟೈಮ್ ವೇಸ್ಟ್ ಆಗುವುದರ ಜೊತೆಗೆ ವಿಪರೀತ ಪಲ್ಯೂಷನ್ ಆಗುತ್ತದೆ. ಫ್ಯೂಯಲ್ ಕೂಡಿ ವೇಸ್ಟ್ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಬಹಳ ಒಳ್ಳೆಯದು. ಪೋಲೀಸ್‌ನವರು ಸ್ವಲ್ಪ ಹೆಚ್ಚಿನ ಜನರನ್ನು ತುಮಕೂರು ರೋಡ್‌ನಲ್ಲಿ

ಹಾಕುವುದು ಬಹಳ ಒಳ್ಳೆಯದು. ಎಸ್‌ಸ್ಪೆಷಲಿ ಟುವೀಲರ್ಸ್ ಬಹಳಷ್ಟು ಬಳಸುತ್ತಿರುವೆಡೆಯಲ್ಲಿ ಪೋಲೀಸ್‌ನವರನ್ನು ಹೆಚ್ಚಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ ಬೆಂಗಳೂರು ನಗರದ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ತುಮಕೂರು ರೋಡ್‌ನಲ್ಲಿ ಮತ್ತು ಹೊಸೂರು ರೋಡ್‌ನಲ್ಲಿ ಇರತಕ್ಕಂಥ ಕಂಜಕ್ಷನ್‌ದಿಂದಾಗಿ ಸ್ವಲ್ಪ ತೊಂದರೆಯಾಗುತ್ತಿರತಕ್ಕಂಥದ್ದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ತುಮಕೂರು ರೋಡ್‌ನಲ್ಲಿಯೂ ಕೂಡ ನಾಲ್ಕು ಲೈನ್ ರೋಡ್ ಇದೆ. ಹೊಸೂರು ರೋಡ್‌ನಲ್ಲಿ ಒಂದು ಲೈನ್ ರೋಡ್ ಇದೆ. ಚೆಕ್‌ಪೋಸ್ಟ್ ಕೂಡ ಇವೆ. ಚೆಕ್‌ಪೋಸ್ಟ್ ಸ್ಥಳಾಂತರ ಮಾಡಲಿಕ್ಕೆ ನಾವು ಡಿಪಾರ್ಟ್‌ಮೆಂಟ್‌ನವರನ್ನು ಕೇಳಿಕೊಂಡಿದ್ದೇವೆ. ಅವರೂ ಕೂಡ ಮಾಡುತ್ತಿದ್ದಾರೆ. ನಿಜವಾಗಿಯೂ ಕೂಡ ಇವತ್ತು ಪೀಕ್‌ಹವರ್ಸ್‌ನಲ್ಲಿ ಪೋಲೀಸ್‌ನವರು ಇರುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ರೀಸೆಂಟ್ ಆಗಿ ಕ್ರಮ ತೆಗೆದುಕೊಂಡಿದ್ದೇವೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಈ ಎಲ್ಲಾ ಕಡೆ ಅಂದರೆ ಎಲ್ಲೆಲ್ಲಿ ಟ್ರಾಫಿಕ್ ಪ್ರಾಬ್ಲಮ್ ಇದೆಯೋ ಅಲ್ಲಿ ಪೋಲೀಸ್‌ನವರನ್ನು ಹಾಕಿ ನಿಯಂತ್ರಣ ಮಾಡಿದ್ದೇವೆ. ಒಟ್ಟಿನಲ್ಲಿ ಅದಕ್ಕೆ ಕೋ ಆರ್ಡಿನೇಷನ್ ಬೇಕಾಗಿದೆ. ಇದಕ್ಕೆ ನಾವು ಕಾರ್ಪೊರೇಷನ್‌ನವರನ್ನೂ ಕೂಡ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಮತ್ತು ನ್ಯಾಷನಲ್ ಹೈವೇನವರನ್ನೂ ಕೂಡ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಈಗ ರೈಟ್ಸ್‌ನವರು ಸರ್ವೆಯನ್ನು ಕಂಡೆಕ್ಟ್ ಮಾಡಿ ರಿಪೋರ್ಟ್ ಕೂಡ ಸರ್ಕಾರಕ್ಕೆ ಕೊಟ್ಟಿದ್ದಾರೆ. ಮತ್ತು ಕಾರ್ಪೊರೇಷನ್‌ಗೂ ಕೂಡ ನಾವು ರಿಕ್ವೆಸ್ಟ್ ಮಾಡಿದ್ದೇವೆ. ಬಿ.ಡಿ.ಎ. ಕೂಡ ರಿಂಗ್ ರೋಡ್ ಮಾಡುವ ಬಗ್ಗೆ ಹೇಳಿದ್ದೇವೆ. ಕಾರ್ಪೊರೇಷನ್ ಗೌವರ್ನಮೆಂಟ್ ಎಲ್ಲಾ ಕೂಡ 50 ಪರ್ಸೆಂಟ್ ಸರ್ಕಾರ ಹಣವನ್ನು ಕೊಡಬೇಕಾಗುತ್ತದೆ. ಕಾರ್ಪೊರೇಷನ್‌ಮತ್ತು ಬಿಡಿಎ ಕೂಡ ಅದನ್ನೆಲ್ಲಾ ಮಾಡಬೇಕಾಗುತ್ತದೆ. ಅದಕ್ಕೆ ಒಂದು 5 ಕೋಟಿ ಯೋಜನೆಯನ್ನು ತಯಾರು ಮಾಡಿದ್ದೇವೆ. ಮತ್ತು ಟ್ರಾಫಿಕ್ ಕಂಟ್ರೋಲ್ ಮಾಡತಕ್ಕಂಥ ರೀತಿಯಲ್ಲಿ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಎಲ್ಲಾ ಕಡೆಗೂ ಪೋಸ್ಟ್ ಕ್ರಿಯೇಟ್ ಮಾಡತಕ್ಕಂಥದ್ದು ಇದೆ. ರೀಸೆಂಟ್ ಆಗಿ ಸರ್ಕಾರ ಕೂಡ ಪೋಸ್ಟ್ ಕ್ರಿಯೇಟ್ ಮಾಡಿದೆ. ಈಗ ಮಾನ್ಯ ಸದಸ್ಯರು ವಿನೇನು ತೊಂದರೆಯಾಗುತ್ತಿದೆ ಎನ್ನತಕ್ಕಂಥದ್ದನ್ನು ಸರ್ಕಾರದ ಗಮನಕ್ಕೆ ತಂದಮೇಲೆ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಮತ್ತೆ ಅದಕ್ಕೆ ಇನ್ನೂ ಕೂಡ ಬಿಗಿ ಮಾಡತಕ್ಕಂಥ ಕ್ರಮ ತೆಗೆದುಕೊಳ್ಳುವ ಮಾತನ್ನೂ ಕೂಡ ಹೇಳುತ್ತೇನೆ.

ಶ್ರೀ ಕೆ. ಪರ್ಷಕುಮಾರ್ ಗೌಡ : ನಗರ ಪ್ರದೇಶಗಳಲ್ಲಿ ಸಂಚಾರಿ ಕಾಯಿದೆ ಜಾರಿಯಲ್ಲಿದೆ. ಬೆಂಗಳೂರು ನಗರದ ರಸ್ತೆಯಲ್ಲಿ ಹೋಗಬೇಕಾದರೆ ಎಡಗಡೆಯಿಂದ ಓಟರ್‌ಟೇಕ್ ಮಾಡಿಕೊಂಡು ಹೋಗುತ್ತಾರೆ. ವೆಹಿಕಲ್‌ನಲ್ಲಿ ಹೋಗಬೇಕಾದರೆ ಪ್ರಾಣ ಹೋದ ಹಾಗೆ ಆಗುತ್ತದೆ. ಇದಕ್ಕೆ ಸರ್ಕಾರದವರು ಬಿಗಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಎಲ್ಲಿಯವರೆಗೆ ರಿಂಗ್ ರೋಡ್‌ಗಳನ್ನು ಮಾಡುವುದಿಲ್ಲ ಅಲ್ಲಿಯವರೆಗೆ ಈ ತೊಂದರೆ ಇರುತ್ತದೆ. ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆ. ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಬಿ.ಡಿ.ಎ.ದಿಂದ ನಿವೇಶನಗಳ ಹಂಚಿಕೆ

2733 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?